**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:2**

**ಎಸ್.ಸಿ. ಸಂಖ್ಯೆ: 10-2019 ಸಿಡಬ್ಲ್ಯೂ:3**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಅನಿತಾ |
| ಗಂಡನ **ಹೆಸರು** | : | ರಂಜಿತ್ |
| **ವಯಸ್ಸು** | : | 32 ವರ್ಷ |
| **ವೃತ್ತಿ** | : | ಮನೆಗೆಲಸ |
| **ವಾಸ** | : | ಸಿದ್ದಾಪುರ, ಕುಂದಾಪುರ ತಾಲೂಕು |

**ದಿನಾಂಕ: 04-08-2021 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ರಂಜಿತ್ (ಚಾಸಾ-2) ನನ್ನ ಗಂಡ. ನ್ಯಾಯಾಲಯದಲ್ಲಿರುವ ಆರೋಪಿ ರವಿರಾಜ ನನ್ನ ಗಂಡನ ಸ್ನೇಹಿತ. ದಿನಾಂಕ 27-02-2019 ರಂದು ಆರೋಪಿ ರವಿರಾಜ ಇವನು ನನ್ನ ಗಂಡನಿಗೆ ಫೋನ್ ಮಾಡಿ ತನಗೆ 25,000/- ರೂಪಾಯಿಗಳು ಬೇಕಾಗಿದೆ ಕೊಡುವಂತೆ ಕೇಳಿರುತ್ತಾನೆ. ಈ ವಿಷಯವನ್ನು ನನ್ನ ಗಂಡ ತಿಳಿಸಿರುತ್ತಾರೆ. ನನ್ನ ಗಂಡನ ಹತ್ತಿರ ಹಣ ಕಡಿಮೆ ಇತ್ತು ಹೀಗಾಗಿ ಉಳಿದ ಹಣ ಕೊಡುವಂತೆ ನನಗೆ ಕೇಳಿರುತ್ತಾರೆ. ನಾನು ಗ್ರಾಮೀಣ ಕೂಟದ ಸಂಘದಲ್ಲಿ ಇದ್ದುದರಿಂದ ನನ್ನ ಹತ್ತಿರ ಸ್ವಲ್ಪ ಹಣ ಇತ್ತು. ದಿನಾಂಕ 28-02-2019 ರಂದು ನಾನು ಮತ್ತು ನನ್ನ ಗಂಡ ಮಾರಣಕಟ್ಟೆ ದೇವಸ್ಥಾನಕ್ಕೆ ಹೋಗುವುದಕ್ಕಾಗಿ ಅಂಪಾರು ಬಸ್ ನಿಲ್ದಾಣದ ಹತ್ತಿರ ಹೊರಟಿದ್ದು ಅಲ್ಲಿಗೆ ಬರುವಂತೆ ನನ್ನ ಗಂಡ ಆರೋಪಿಗೆ ಹೇಳಿರುತ್ತಾನೆ. ಬೆಳಿಗ್ಗೆ 11.30 ರ ಸುಮಾರಿಗೆ ಆರೋಪಿ ಬಸ್ ನಿಲ್ದಾಣದ ಹತ್ತಿರ ಬಂದಿದ್ದು ನನ್ನ ಗಂಡ ಅವನಿಗೆ 25,000/- ರೂ.ಗಳನ್ನು ಕೊಟ್ಟಿರುತ್ತಾನೆ. ಆರೋಪಿ ಹಣವನ್ನು ಮರುದಿನವೇ ವಾಪಾಸು ಕೊಡುತ್ತೇನೆ ಎಂದು ಹೇಳಿರುತ್ತಾನೆ. ದಿನಾಂಕ 28-02-2019 ರಂದು ರಾತ್ರಿಯೇ ಫೋನ್ ಮಾಡಿ ಹಣ ಕೊಡುವಂತೆ ಕೇಳಲು ನನ್ನ ಗಂಡನಿಗೆ ತಿಳಿಸಿರುತ್ತೇನೆ. ಫೋನ್

**ಎಸ್.ಸಿ. ಸಂಖ್ಯೆ: 10-2019**
**ಪಿಡಬ್ಲ್ಯು:2**
**ಸಿಡಬ್ಲ್ಯು:3**

ಮಾಡಿದಾಗ ಬೆಳಿಗ್ಗೆ ಹಣ ಕೊಡುವುದಾಗಿ ಆರೋಪಿ ತಿಳಿಸಿರುತ್ತಾನೆ. ಬೆಳಿಗ್ಗೆ (01-03-2019 ರಂದು) ಆರೋಪಿ ನನ್ನ ಗಂಡನಿಗೆ ಫೋನ್ ಮಾಡಿ ನನ್ನ ಹೆಂಡತಿಯ ಹತ್ತಿರ ಚಿನ್ನ ಇದ್ದು ಅದನ್ನು ತಂದು ಕೊಡುತ್ತೇನೆ ಅದನ್ನು ಬ್ಯಾಂಕ್‌ನಲ್ಲಿ ಅಡಮಾನ ಮಾಡಿ ನಿಮ್ಮ ಹಣ ಪಡೆದು ಉಳಿದ ಹಣವನ್ನು ತನಗೆ ಕೊಡುವಂತೆ ತಿಳಿಸಿರುತ್ತಾನೆ. ದಿನಾಂಕ 01-03-2019 ರಂದು ಬೆಳಿಗ್ಗೆ 6.30 ರ ಸುಮಾರಿಗೆ ಆರೋಪಿ ನಮ್ಮ ಮನೆ ಹತ್ತಿರದ ರೋಡ್‌ನಲ್ಲಿ ನಿಂತು ನನ್ನ ಗಂಡನಿಗೆ ಫೋನ್ ಮಾಡಿ ಬರುವಂತೆ ತಿಳಿಸಿರುತ್ತಾನೆ. ಆ ಪ್ರಕಾರ ನನ್ನ ಗಂಡ ಅಲ್ಲಿಗೆ ಹೋಗಿ ಆರೋಪಿಯಿಂದ ಚಿನ್ನವನ್ನು ಪಡೆದುಕೊಂಡು ಮನೆಗೆ ಬಂದಿರುತ್ತಾನೆ. ಲಕ್ಷ್ಮಿ ಪೆಂಡೆಂಟ್ ಇದ್ದ ಚಿನ್ನದ ತಾಳಿಯನ್ನು ನನ್ನ ಗಂಡ ತಂದು ತೋರಿಸಿರುತ್ತಾನೆ.

ನನ್ನ ಗಂಡ ಈ ಚಿನ್ನದ ಆಭರಣವನ್ನು ಬ್ಯಾಂಕ್‌ನಲ್ಲಿ ಅಡ ಇಟ್ಟು ಎಷ್ಟು ಹಣ ಬರುತ್ತದೆ ಅದನ್ನು ತರುವಂತೆ ನನಗೆ ತಿಳಿಸಿರುತ್ತಾನೆ. ದಿನಾಂಕ 02-03-2019 ರಂದು ನಾನು ಎಸ್‌ಸಿಡಿಸಿಸಿ ಬ್ಯಾಂಕ್, ಸಿದ್ದಾಪುರಕ್ಕೆ ಹೋಗಿ ವಿಚಾರಿಸಲಾಗಿ ಅಡಮಾನದಿಂದ 41,000/- ರೂಪಾಯಿ ಹಣ ದೊರೆಯುತ್ತದೆ ಎಂದು ತಿಳಿಸಿರುತ್ತಾರೆ. ನಾನು ಚಿನ್ನವನ್ನು ಬ್ಯಾಂಕ್‌ನಲ್ಲಿಟ್ಟು ಹಣ ಪಡೆದಿರುತ್ತೇನೆ. ಈಗ ನೋಡಿದ ಸಾಲದ ಅರ್ಜಿಯನ್ನು ಆ ದಿನ ನಾನು ಎಸ್‌ಸಿಡಿಸಿಸಿ ಬ್ಯಾಂಕ್, ಸಿದ್ದಾಪುರಕ್ಕೆ ನೀಡಿದ್ದೇನೆ. ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

ಬ್ಯಾಂಕ್‌ನಿಂದ ತಂದ ಹಣವನ್ನು ನನ್ನ ಗಂಡನಿಗೆ ಕೊಟ್ಟಿರುತ್ತೇನೆ. ನನ್ನ ಗಂಡ ಫೋನ್ ಮಾಡಿ ಅಡಮಾನದಿಂದ ಬಂದ ಹಣದಲ್ಲಿ ಉಳಿದ ಹಣವನ್ನು ತೆಗೆದುಕೊಂಡು ಹೋಗಲು ಆರೋಪಿಗೆ ತಿಳಿಸಿರುತ್ತಾನೆ. ನಂತರ ಆರೋಪಿ ಬಂದು ಹಣ ತೆಗೆದುಕೊಂಡು ಹೋಗಿದ್ದಾನೆ. ಆ ದಿನ ನನ್ನ ಗಂಡ ಬ್ಯಾಂಕ್‌ನಲ್ಲಿ ಅಡಮಾನ ಮಾಡುವುದಕ್ಕಾಗಿ ಕೊಟ್ಟಿದ್ದ ಚಿನ್ನದ ಆಭರಣವನ್ನು ನೋಡಿದರೆ ಗುರುತಿಸುತ್ತೇನೆ. ಈಗ

**ಎಸ್.ಸಿ. ಸಂಖ್ಯೆ: 10-2019**
**ಪಿಡಬ್ಲ್ಯೂ:2**
**ಸಿಡಬ್ಲ್ಯೂ:3**

ನೋಡಿದ ಚಿನ್ನದ ಸರವನ್ನು ನಾನು ಬ್ಯಾಂಕ್‌ನಲ್ಲಿ ಅಡಮಾನ ಮಾಡಿದ್ದೇನೆ. ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ.

ದಿನಾಂಕ **12-03-2019** ರಂದು ಪೊಲೀಸರು ನನ್ನ ಗಂಡನಿಗೆ ಫೋನ್ ಮಾಡಿ ಆರೋಪಿ ಕೊಟ್ಟಿದ್ದ ಚಿನ್ನದ ಆಭರಣ ಕೊಲೆ ಕೇಸಿಗೆ ಸಂಬಂಧಪಟ್ಟಿದ್ದು ಅದನ್ನು ತಾವು ಪಡೆದುಕೊಳ್ಳಬೇಕಾಗಿರುವುದರಿಂದ ಬ್ಯಾಂಕ್‌ನ ಹತ್ತಿರ ಬರುವಂತೆ ತಿಳಿಸಿರುತ್ತಾರೆ. ನಾನು ನನ್ನ ಗಂಡ ಬ್ಯಾಂಕ್ ಹತ್ತಿರ ಹೋದಾಗ ಪೊಲೀಸರು ಮತ್ತು ನ್ಯಾಯಾಲಯದಲ್ಲಿರುವ ಆರೋಪಿ ಹಾಗೂ ಇನ್ನೂ ಇಬ್ಬರು ಇದ್ದರು. ಬ್ಯಾಂಕ್‌ನಲ್ಲಿ ನಾನು ಅಡಮಾನ ಮಾಡಿ ಇಟ್ಟಿದ್ದ ಚಿನ್ನದ ಆಭರಣವನ್ನು ಪೊಲೀಸರು ಬ್ಯಾಂಕ್‌ನಿಂದ ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಫೋಟೋ ತೆಗೆದಿರುತ್ತಾರೆ ಹಾಗೂ ದಾಖಲೆಯನ್ನು ತಯಾರಿಸಿರುತ್ತಾರೆ. ಈಗ ನೋಡಿದ ಮಹಜರಿನಲ್ಲಿರುವ ಸಹಿ ನನ್ನದು ಇದೆ. ಮಹಜರನ್ನು ನಿಪಿ-6 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಮಹಜರು ಮಾಡಿದ ಸಮಯದಲ್ಲಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ಇದಾದ 2 ದಿನಗಳ ನಂತರ ನಾನು ಮತ್ತು ನನ್ನ ಗಂಡ ಕುಂದಾಪುರ ನ್ಯಾಯಾಲಯಕ್ಕೆ ಬಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ ಮತ್ತು ಅದಕ್ಕೆ ಸಹಿ ಮಾಡಿರುತ್ತೇನೆ. **(ಸೀಲ್ ಇರುವ ಲಕೋಟೆಯನ್ನು ತೆರೆಯಲಾಗಿ ಅದರಲ್ಲಿ ಸಾಕ್ಷಿಯ ಹೇಳಿಕೆಯ ದಾಖಲೆ ಇರುವುದು ಕಂಡು ಬಂದಿರುತ್ತದೆ)** ಈಗ ನೋಡಿದ ಹೇಳಿಕೆಯಲ್ಲಿರುವ ಸಹಿ ನನ್ನದು ಇದೆ. ಹೇಳಿಕೆಯನ್ನು ನಿಪಿ-7 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಎಸ್.ಸಿ. ಸಂಖ್ಯೆ: 10-2019
ಪಿಡಬ್ಲ್ಯೂ:2
ಸಿಡಬ್ಲ್ಯೂ:3

<u>ಪಾಟೀ ಸವಾಲು:</u> ಆರೋಪಿ ಪರ ಶ್ರೀ ಎಂ.ಎಸ್.ಎಸ್. ವಕೀಲರಿಂದ

ಈ ಕೇಸಿನ ಸಾಕ್ಷಿ 2 ಇವರ ವಿಚಾರಣೆ ಮುಗಿದ ನಂತರ ಸಾಕ್ಷಿ 3 ಇವರ ಪಾಟೀ ಸವಾಲನ್ನು ಮಾಡುವುದಾಗಿ ತಿಳಿಸಿ ಸಮಯ ಕೇಳಿದ್ದು ಅದಕ್ಕೆ ಸರ್ಕಾರಿ ಅಭಿಯೋಜಕರು ತಕರಾರು ಮಾಡಿದ್ದಾರೆ. ಈ ದಿನ ವಿಚಾರಣೆಗಾಗಿ ಸಾಕ್ಷಿ 1 ರಿಂದ 3 ಇವರಿಗೆ ಸಮನ್ಸ್ ನೀಡಲಾಗಿದ್ದು ಸಾಕ್ಷಿದಾರರಿಗೆ ಖುದ್ದಾಗಿ ಸಮನ್ಸ್ ಜಾರಿಯಾಗಿದೆ ಆದರೆ ಸಾಕ್ಷಿ 2 ಇವರು ಈ ದಿನ ನ್ಯಾಯಾಲಯದ ಮುಂದೆ ಹಾಜರಿಲ್ಲ. ಈ ಹಿನ್ನಲೆಯಲ್ಲಿ ಸಾಕ್ಷಿ 2 ಇವರ ಮುಖ್ಯ ವಿಚಾರಣೆ ಮುಗಿದ ನಂತರ ಸಾಕ್ಷಿ 3 ಇವರ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.
ಕುಂದಾಪುರ